

## ಗೋರಿಗಳಿಗೆ ಕೊಳವೆ

ಹಿರೀಕರಿಗೆ ಬ್ರಾಂದಿ, ವಿಸ್ಕಿ, ತರಹೇವಾರಿ ಮಾಂಸಾಹಾರಿ ಖಾದ್ಯಗಳನ್ನು ಎಡೆ ಇಡುವುದನ್ನು ಕೇಳಿದ್ದೇವೆ. ಆದರೆ, ರೋಮ್‌ನ ಸ್ಮಶಾನಗಳಲ್ಲಿ ಗೋರಿಗಳಿಗೆ ಕೊಳವೆ ಅಳವಡಿಸಲಾಗಿರುತ್ತದೆ. ಸತ್ತವರಿಗೆ ಇಷ್ಟವಾಗಿದ್ದ ವೈನ್, ಜೇನು, ಆಹಾರ ತಿನಿಸುಗಳನ್ನು ಈ ಕೊಳವೆಗಳ ಮೂಲಕ ಪೂರೈಸಲಾಗುತ್ತದೆ. ಮನುಷ್ಯ ಸತ್ತರೂ ಆತನೊಳಗಿರುವ ಆಸೆ ಸಾಯುವುದಿಲ್ಲ ಎಂಬ ನಂಬಿಕೆಯ ಮೇಲೆ ಈ ಆಚರಣೆಯಿದೆ.

## ಹೆಣ ತಿನ್ನುವ ಪದ್ಧತಿ



ಸತ್ತವರನ್ನು ನೆನಪಿಸಿಕೊಳ್ಳಲು ನಾನಾ ದಾರಿಗಳಿವೆ. ಅದರಲ್ಲಿ ಹೆಣ ತಿನ್ನುವುದು ಒಂದು! ವೆನಿಜುಲಾ ಮತ್ತು ಬ್ರೆಜಿಲ್‌ನಲ್ಲಿ ಯೋನೊಮ್ಯಾಮೊ ಎಂಬ ಬುಡಕಟ್ಟು ಜನಾಂಗದಲ್ಲಿ ಕುಟುಂಬದ ಆಪ್ತ ಸದಸ್ಯರು ಸತ್ತರೆ, ದೇಹವನ್ನು ತುಂಬ ಹೊತ್ತು ಇಟ್ಟುಕೊಳ್ಳುವಂತಿಲ್ಲ. ಹಾಗಾಗಿ ತಕ್ಷಣವೇ ಹೆಣವನ್ನು ಸುಡುತ್ತಾರೆ. ಸುಡುವಾಗ ಉಳಿದ ಭಾಗವನ್ನು ಎಲ್ಲರೂ ಹಂಚಿಕೊಂಡು ತಿನ್ನುತ್ತಾರೆ. ಆ ಮೂಲಕ ಅವರ ನೆನಪನ್ನು ತಮ್ಮೊಳಗೆ ಸ್ಥಾಯಿಗೊಳಿಸಲು ಇರುವ ದಾರಿಯಂತೆ.



## ಸ್ನಾನ-ಶೌಚ ನಿಷಿದ್ಧ

ಇಂಡೋನೇಷ್ಯಾದ ಅತಿ ದೊಡ್ಡ ದ್ವೀಪ ನಾರ್ಥನ್ ಬಾರ್ನಿಯಲ್ಲಿ ಹಸೆಮಣೆ ಏರಿದ ವಧುವರರು ಹಸೆಮಣೆಯನ್ನು ಬಿಟ್ಟು ಮೂರು ದಿನಗಳ ಕಾಲ ಕದಲುವಂತಿಲ್ಲ. ಸ್ನಾನ, ಶೌಚ, ಮೂತ್ರ ವಿಸರ್ಜನೆಯೂ ಬಂದ್. ಇದು ಟಿಡಾಂಗ್ ಎನ್ನುವ ಬುಡಕಟ್ಟು ಸಮುದಾಯದಲ್ಲಿ ಇಂದಿಗೂ ಚಾಲ್ತಿಯಲ್ಲಿರುವ ಆಚರಣೆ. ಇದಕ್ಕೆ ಭಂಗ ಬಾರದೆಂದು ವಧುವರರಿಗೆ ಕಡಿಮೆ ಪ್ರಮಾಣದಲ್ಲಿ ಆಹಾರ–ನೀರು ನೀಡಲಾಗುತ್ತದೆ. ಹೀಗೆ ಮೂರು ದಿನಗಳ ಕಾಲ ಹೀಗೆ ಕುಳಿತವರು ಮುಂದೆ ವೈವಾಹಿಕ ಜೀವನದಲ್ಲಿ ಎಂಥ ಕಠಿಣ ಪರಿಸ್ಥಿತಿಯಲ್ಲಿಯೂ ಬೇರೆಯಾಗುವುದಿಲ್ಲ ಎನ್ನುವ ನಂಬಿಕೆಯಂತೆ.



## ಕೈಬೆರಳಿಗೆ ಕತ್ತರಿ

ಸತ್ತರೆ ತಲೆಕೂದಲು ಬೋಳಿಸುವುದನ್ನು ಕೇಳಿದ್ದೇವೆ. ಆದರೆ ಇಂಡೋನೇಷ್ಯಾದ ದಾನಿ ಎಂಬ ಬುಡುಕಟ್ಟು ಕುಟುಂಬದಲ್ಲಿ ಯಾರಾದರೂ ಸತ್ತರೆ ಮಹಿಳೆಯರು ತಮ್ಮ ಕೈಬೆರಳನ್ನು ಕತ್ತರಿಸಿಕೊಳ್ಳುತ್ತಾರೆ. ಮಾನಸಿಕ ದುಃಖವನ್ನು ನೀಗಿಕೊಳ್ಳಲು ದೈಹಿಕವಾಗಿ ಹಿಂಸೆ ಅನುಭವಿಸುತ್ತಾರೆ. ಜತೆಗೆ ಪೂರ್ವಿಕರ ಆತ್ಮಕ್ಕೆ ಶಾಂತಿ ಸಿಗಲಿ ಎಂಬ ಉದ್ದೇಶವೂ ಇದೆಯಂತೆ. ಆದರೆ, ಹೆಣ್ಣುಮಕ್ಕಳ ಕೈಬೆರಳೇ ಏಕೆ? ಎಂಬ ಪ್ರಶ್ನೆ ಮಾತ್ರ ಚರ್ಚೆಯ ವಸ್ತುವಾಗಿಯೇ ಉಳಿದಿದೆಯಂತೆ.



## ನೀಳ ಕತ್ತಿಗಾಗಿ ರಿಂಗ್ಸ್

ಥಾಯ್ಲೆಂಡ್‌ನಲ್ಲಿ ಕರೇನ್ ಬುಡಕಟ್ಟು ಸಮುದಾಯದ ಮಹಿಳೆಯರು ನೀಳ ಕತ್ತಿಗಾಗಿ ದೊಡ್ಡ ಗಾತ್ರದ ರಿಂಗ್‌ಗಳನ್ನು ತೊಡುತ್ತಾರೆ. ಜಿರಾಫೆಯಂತೆ ನೀಳ ಕತ್ತಿರುವವರು ಸುಂದರಿಯರು ಎಂದು ಹೇಳಿದವರು ಯಾರೋ?. ಆದರೆ, ಅದನ್ನು ಈ ಮಹಿಳೆಯರು ಅಕ್ಷರಶಃ ಪಾಲಿಸುತ್ತಾರೆ. ಇಂದಿಗೂ ಕರೇನ್ ಮಹಿಳೆಯರು ಎಳೆ ಹೆಣ್ಣುಮಕ್ಕಳಿಗೂ ಇದನ್ನು ತೊಡಿಸಿ, ನೀಳ ಕತ್ತಿಗಾಗಿ ಹಾತೊರೆಯುತ್ತಾರಂತೆ.

## ಭಕ್ಷ್ಯಭೋಜನ ಚೆಲ್ಲಾಪಿಲ್ಲಿ



ಶಾಸ್ತ್ರ, ಸಂಪ್ರದಾಯಗಳನ್ನು ಅರಿಯಲು ಆಯಾ ಜನಾಂಗದ ಮದುವೆಯನ್ನೊಮ್ಮೆ ನೋಡಬೇಕು ಎನ್ನುವ ಮಾತಿದೆ. ಹಾಗೊಮ್ಮೆ ಜರ್ಮನಿಗರು ಮಾಡುವ ಮದುವೆಗೇನಾದರೂ ಹೋದರೆ ಅಲ್ಲಿ ಗಂಡು–ಹೆಣ್ಣಿನ ಕಡೆಯವರು ಒಟ್ಟಿಗೆ ಕುಳಿತು ಖಾದ್ಯ ಸವಿಯುವುದಿಲ್ಲ. ಬದಲಿಗೆ ಭಕ್ಷ್ಯಭೋಜನಗಳಿರುವ ಪಿಂಗಾಣಿ ಪಾತ್ರೆಗಳನ್ನು, ತಟ್ಟೆಗಳನ್ನೆಲ್ಲಾ ಒಡೆದು ಚೂರು ಚೂರು ಮಾಡುತ್ತಾರೆ. ವರ ಮತ್ತು ವಧು ಇಬ್ಬರೂ ಸೇರಿಕೊಂಡು ಚೆಲ್ಲಾಪಿಲ್ಲಿಯಾಗಿ ಬಿದ್ದ ತಟ್ಟೆಗಳನ್ನು ಗುಡಿಸಿ, ಸ್ವಚ್ಛಗೊಳಿಸಬೇಕು. ಕಷ್ಟದ ದಿನಗಳಲ್ಲಿ ಸಂಗಾತಿಗಳು ಪರಸ್ಪರ ಹೆಗಲಾಗುವುದನ್ನು ಈ ಆಚರಣೆ ಕಲಿಸುತ್ತದೆಯಂತೆ.